ಒ ಎಸ್ .ಸಂಖ್ಯೆ:257/2013

ಪಿ ಡಬ್ಲ್ಯೂ:1

ದಿನಾಂಕ: 17.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: 1 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಬಿ.ಆರ್.ಪಿ ಅವರಿಂದ:

1. ನಾನು ಶಾಲೆಯನ್ನು ಕಲಿತಿಲ್ಲ. ನಾನು ಕಾಗದ ಪತ್ರಕ್ಕೆ ಹೆಬ್ಬಟ್ಟು ಹಾಕುತ್ತೇನೆ. ನಾನು ಹೊನ್ನವ್ವನ ಮೇಲೆ ಕೇಸ್ ಹಾಕಿರುತ್ತೇನೆ. ನನ್ನ ಗಂಡಜ್ಜನ ಹೆಸರು ಗುರನಗೌಡ. ನನ್ನ ಗಂಡಜ್ಜಿಯ ಹೆಸರು ಗೊತ್ತಿಲ್ಲ. ಗುರನಗೌಡನಿಗೆ 3 ಜನ ಮಕ್ಕಳು, ಅವರ ಹೆಸರು ಹೊನ್ನನಗೌಡ, ದ್ಯಾಮನಗೌಡ ಮತ್ತು ಗೋವಿಂದಗೌಡ. ನನ್ನ ಕಾಕಾಗಳು ತೀರಿಕೊಂಡಿರುತ್ತಾರೆ. ಅವರು ತೀರಿಕೊಂಡು ಸುಮಾರು 20 ವರ್ಷ ಆಗಿದೆ.
2. ನಾನು ಕೇಸು ಮಾಡಿರುವ ಆಸ್ತಿ ನಮ್ಮ ಅಜ್ಜನಿಂದ ಬಂದ ಆಸ್ತಿ ಅಲ್ಲಾ ಎಂದರೆ ಸರಿಯಲ್ಲ. ದಾವಾ ಆಸ್ತಿ ನಮ್ಮ ಅಜ್ಜನ ಆಸ್ತಿ ಎಂದು ತೋರಿಸಲು ಕಾಗದ ಪತ್ರ ಹಾಜರುಪಡಿಸಿದ್ದೇನೆ ಎಂದರೆ ಸಾಕ್ಷಿಯು ಉತ್ತರಿಸಿರುವುದಿಲ್ಲ.
3. ನನ್ನ ತಂದೆ ತೀರಿಕೊಂಡ ನಂತರ ನಾನು, ನನ್ನ ತಾಯಿ ಮತ್ತು ನನ್ನ ಅಕ್ಕವರು, ನನ್ನ ಕಾಕಾ ಹೊನ್ನಗೌಡ ಮತ್ತು ದ್ಯಾಮನಗೌಡ ಅವರ ಮೇಲೆ 1984 ರಲ್ಲಿ ಓ.ಎಸ್. 54/1984 ಎಂಬ ದಾವೆ ಮಾಡಿದ್ದರು ಎಂದರೆ ಸಾಕ್ಷಿಯು ನನ್ನ ತಾಯಿ ಮಾಡಿದ್ದಳು ಎಂದು ನುಡಿಯುತ್ತಾರೆ. ಆ ದಾವೆ ದಿನಾಂಕ: 30-11-1991 ರಂದು ನಮಗೆ ಪಾಲುಕೊಡಬೇಕೆಂದು ಆದೇಶ ಆಗಿತ್ತು ಎಂದರೆ ಸರಿ. ಆ ದಾವೆಯನ್ನು ಸ.ನಂ.113 ಹಿಸ್ಸಾ-2, 10 ಎಕರೆ 21 ಗುಂಟೆ ಮತ್ತು ಸ.ನಂ.47 ರಲ್ಲಿ 6 ಎಕರೆ 22 ಗುಂಟೆ ಹಾಗೂ ಮನೆ ಸಂಖ್ಯೆ: 31 ರ ಕುರಿತು ಮಾಡಿದ್ದೇವೆ ಎಂದರೆ ಸರಿ. ಆ ದಾವೆ ಹಾಕಿದಾಗಿನಿಂದಲೂ ನಮಗೂ ಮತ್ತು ನಮ್ಮ ಕಾಕಾಗಳಿಗೂ ಸಂಬಂಧ ಚೆನ್ನಾಗಿ ಇರಲಿಲ್ಲ ಎಂದರೆ ಸರಿ. ಆ ದಾವೆ ನಮ್ಮ ಪರವಾಗಿ ಆದ ನಂತರ ನಮ್ಮ ಕಾಕಾಗಳು ಸದರಿ ಡಿಕ್ರಿಯನ್ನು ಆರ್.ಎ.5/2019 ರಲ್ಲಿ ಅಪೀಲು ಮಾಡಿ ಪ್ರಶ್ನಿಸಿದ್ದರು ಎಂದರೆ

ಸರಿ. ನಮ್ಮ ಕಾಕಾಗಳು ಹಾಕಿದ ಅಪೀಲು ಡಿಸಮಿಸ್ ಆಗಿತ್ತು ಎಂದರೆ ಸರಿ. ಆನಂತರ ನಮ್ಮ ಕಾಕಾಗಳು ನಮ್ಮ 3 ಜನರಿಗೆ ಪಾಲು ಕೊಡುವುದು ಬೇಡ ಎಂದು 1 ಲಕ್ಷ ರೂ ಹಣ ಕೊಟ್ಟಿದ್ದರು ಎಂದರೆ ಸರಿ.

4. ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿ ಶಾಖಾಪೂರದಲ್ಲಿ ಬಂದು ವಾಸವಿದ್ದಳು ಎಂದರೆ ಸರಿ. ನನ್ನ ಹಾಗೂ ನನ್ನ ಅಕ್ಕನ ಮದುವೆಯನ್ನು ನನ್ನ ತಾಯಿಯೇ ಮಾಡಿರುತ್ತಾಳೆ ಎಂದರೆ ಸರಿ. ನಮ್ಮ ಮದುವೆ ಮುಂಚಿತವಾಗಿ ಹಾಗೂ ಅದರ ನಂತರ ಮನೆ ಖರ್ಚು ವೆಚ್ಚಗಳನ್ನು ನನ್ನ ತಾಯಿಯೇ ಮಾಡಿರುತ್ತಾಳೆ ಎಂದರೆ ಸರಿ. ನನ್ನ ಅಕ್ಕನ ಮದುವೆ ಯಾವ ವರ್ಷದಲ್ಲಿ ಆಗಿದೆ ಎಂದು ಹೇಳಲು ಆಗುವುದಿಲ್ಲ. ನನ್ನ ಮದುವೆ 20 ವರ್ಷದ ಹಿಂದೆ ಆಗಿದೆ. ನನ್ನ ಮದುವೆ ಆಗುವ ಸುಮಾರು 8 ವರ್ಷಗಳ ಹಿಂದೆ ನನ್ನ ಅಕ್ಕನ ಮದುವೆ ಆಗಿದೆ ಎಂದರೆ ಸರಿ. ನನ್ನ ಅಕ್ಕನ ಮದುವೆಯಾದಾಗಿನಿಂದ ಆಕೆ ಗಂಡನ ಮನೆಯಲ್ಲಿ ಇದ್ದಾಳೆ ಎಂದರೆ ಸರಿ . ನನ್ನ ಅಕ್ಕನ ಗಂಡನ ಊರು ಸಹ ಶಾಖಾಪೂರ ಎಂದರೆ ಸರಿ. ನಾನು ಸಹ ನನ್ನ ಗಂಡನ ಮನೆಯಲ್ಲಿಯೇ ಇದ್ದೇನೆ ಎಂದರೆ ಸರಿ.

5. ನಾನು ಇತ್ತೀಚೆಗೆ ಭಾಗ ಬೇಕು ಎಂದು ಎಫ್.ಡಿ.ಪಿ. 13/2025 ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ಕೇಸನ್ನು ನಾನು ಹೊನ್ನವ್ವಳ ಮೇಲೆ ಮಾಡಿರುತ್ತೇನೆ. ಬೇರೆದವರು ಯಾರೂ ಇಲ್ಲ.

6. ದಾವಾ ಐಟಂ ನಂ.2 ರ ಮನೆ ನನ್ನ ಸೋದರ ಮಾವನದ್ದು ಆತ ಅದನ್ನು ನನಗೆ ಮತ್ತು ನನ್ನ ಅಕ್ಕನಿಗೆ ಕೊಟ್ಟಿರುತ್ತಾನೆ. ಸದರಿ ಮನೆಯನ್ನು ನನ್ನ ಸಹೋದರ ಮಾವ ನಮಗೆ ಕೊಟ್ಟಿರುತ್ತಾನೆ ಎಂದು ತೋರಿಸಲು ಕಾಗದ ಪತ್ರ ಹಾಜರುಪಡಿಸಿರುತ್ತೇನೆ. ಸದರಿ ಮನೆ ನನಗಾಗಲೀ ನನ್ನ ಅಕ್ಕನಿಗಾಗಲೀ ಸಂಬಂಧಿಸಿಲ್ಲ. ನನ್ನ ತಾಯಿಗೆ ಮಾತ್ರ ಸಂಬಂಧಿಸಿದ್ದು ಎಂದರೆ ಸರಿಯಲ್ಲ.

7. ದಾವಾ ಐಟಂ ನಂ.1 ರ ಜಮೀನನ್ನು ನನ್ನ ಅಕ್ಕ 1 ನೇ ಪ್ರತಿವಾದಿ ಮತ್ತು ಆಕೆಯ ಗಂಡ ಸ್ವಂತ ದುಡಿದು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ನನ್ನ ಅಕ್ಕ ಮತ್ತು ಆಕೆಯ ಗಂಡ ಕೀರುಬಾಯಿ ಗಂಡಃ ಕೃಷ್ಣಪ್ಪ ಚಿತ್ರಗಾರ ಅವರಿಂದ 48,000/-

ರೂ.ಗಳಿಗೆ ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ನಮ್ಮ ಅವ್ವ ಖರೀದಿ ಹಿಡಿದಿರುತ್ತಾಳೆ ಎಂದು ನುಡಿಯುತ್ತಾಳೆ. ನಮ್ಮ ಅವ್ವ ಖರೀದಿ ಹಿಡಿದ ಬಗ್ಗೆ ಕಾಗದ ಪತ್ರ ಹಾಜರುಪಡಿಸಿದ್ದೀರಾ ಎಂದರೆ ಹೌದು ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಹೊಲ ಖರೀದಿ ಹಿಡಿದಾಗ ನಾನು ಇರಲಿಲ್ಲ ಆದರೆ ನಮ್ಮ ಅವ್ವ ಹಿಡಿದಿರುತ್ತಾಳೆ ಎಂದು ನುಡಿಯುತ್ತಾರೆ. ದಿನಾಂಕಃ**23-08-1999** ರಂದು ಸದರಿ ಜಮೀನನ್ನು ಖರೀದಿ ಹಿಡಿದಾಗಿನಿಂದ ನನ್ನ ಅಕ್ಕ ಆ ಜಮೀನಿನ ಸ್ವಾಧೀನದಲ್ಲಿ ಇದ್ದಾಳೆ ಎಂದರೆ ಸಾಕ್ಷಿಯು ನಮ್ಮ ಅವ್ವ ಹಿಡಿದಿರುತ್ತಾಳೆ ಎಂದು ನುಡಿಯುತ್ತಾರೆ.

**8.** **2013** ರಲ್ಲಿ ನಾನು ನನ್ನ ತಾಯಿಗೆ ತಿಳಿಯದಂತೆ ಆಕೆಯ ಸಹಿ ಪಡೆದುಕೊಂಡು ನಾನು ದಾವೆ ಹಾಕಿದ್ದು ಅದು ತಿಳಿದ ನಂತರ ನನ್ನ ತಾಯಿ ಬೇರೆ ವಕೀಲರನ್ನು ನೇಮಿಸಿಕೊಂಡು ಈ ಕೇಸಿಗೆ ತಕರಾರು ಸಹ ಸಲ್ಲಿಸಿರುತ್ತಾಳೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.**1** ರ ಜಮೀನಿಗೆ ನಾನಾಗಲೀ ನನ್ನ ತಾಯಿಯಾಗಲೀ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ.**1** ರ ಕಂದಾಯವನ್ನು ನನ್ನ ಅಕ್ಕ ತುಂಬುತ್ತಾಳೆ ಎಂದರೆ ಸರಿಯಲ್ಲ. ಸದರಿ ಹೊಲದಲ್ಲಿ ದಿನಾಂಕಃ **04-09-2000** ರಲ್ಲಿ **1** ನೇಪ್ರತಿವಾದಿ ನನ್ನ ಅಕ್ಕ ಬೋರವೆಲಿ ಹಾಕಿಸಿ ವಿದ್ಯುತ್ ಸಂಪರ್ಕ ಸಹ ಪಡೆದಿರುತ್ತಾಳೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದ ನಮ್ಮ ಅವ್ವ ಹಾಕಿಸಿರುತ್ತಾಳೆ ಎಂದು ನುಡಿಯುತ್ತಾರೆ.

**9.** ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಮ್ಮ ಅಕ್ಕನಿಗೆ ತೊಂದರೆ ನೀಡಲು ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(2 ನೇ ಪ್ರತಿವಾದಿ ಪರ ವಕೀಲರು ಸಮಯಾವಾಕಾಶ ಕೇಳಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ. ನ್ಯಾ.ದಂಡಾಧಿಕಾರಿಗಳು, ಕುಷ್ಟಗಿ